ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ, ಉಡುಪಿ.

ಸಿ.ಸಿ.:37/2019

ಸಿ.ಡಬ್ಲ್ಯು.13 ಪಿ.ಡಬ್ಲ್ಯೂ : 5

| | |
|---|---|
| ಸಾಕ್ಷಿದಾರರ ಹೆಸರು | . ವೆಂಕಟೇಶ್ |
| ತಂದೆಯ ಹೆಸರು | ಗುಂಡಪ್ಪ |
| ವಯಸ್ಸು | 48 ವರ್ಷ |
| ಉದ್ಯೋಗ | ಹೆಚ್.ಸಿ. |
| ವಾಸಸ್ಥಳ | ಕೊಲ್ಲೂರು. |

ದಿನಾಂಕಃ 26.06.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ದ.ಪ್ರ.ಸಂ. 299 ರಡಿಯಲ್ಲಿನ ವಿಚಾರಣೆಃ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

2014 ರಿಂದ 2016 ರ ಆಗಸ್ಟ್ ತಿಂಗಳಿನವರೆಗೆ ಮಣಿಪಾಲ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿನಾಂಕ 25.04.2016 ರಿಂದ ಹಗಲು ಕರ್ತವ್ಯದಲ್ಲಿರುವಾಗ ಚಾ.ಸಾ.1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ನೀಡಿದರು. ಅವರು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 130/2016 ರಂತೆ 380,457 ರ ರೀತಿಯ ಅಪರಾಧಗಳಿಗಾಗಿ ಪ್ರ.ವ.ವ.ಯನ್ನು ತಯಾರಿಸಿ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆನು ಹಾಗೂ ಅದರ ಬಗ್ಗೆ ನಕಲನ್ನು ಮೇಲಾಧಿಕಾರಿಯವರಿಗೆ ಸಲ್ಲಿಸಿ ವರದಿ ಮಾಡಿದೆನು. ಸಾಕ್ಷಿಯವರು ದೂರಿನ ಯಥಾ ನಕಲನ್ನು ನೋಡಿ ಇದೇ ಎಂದು ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ.13 ಎಂದು ಗುರ್ತಿಸಲಾಗಿದೆ. ಸಾಕ್ಷಿಯವರು ಪ್ರ.ವ.ವ.ಯ ಯಥಾ ನಕಲನ್ನು ನೋಡಿ ಇದೇ ಪ್ರ.ವ.ವ. ಗುರ್ತಿಸಿದ್ದು ಅದನ್ನು ನಿಪಿ.14 ಎಂದು ಗುರ್ತಿಸಲಾಯಿತು. ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ.14 ರವರಿಗೆ ನೀಡಿದೆನು.

ದ.ಪ್ರ.ಸಂ.299 ರಡಿಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ. ಮತ್ತು ಎಸಿಜೆಎಂ ಉಡುಪಿ.